ಪ್ರಸ್ತುತ ವಾ.ಕ.ರ.ಸಾ. ಸಂಸ್ಥೆಯ ಯಾವುದೇ ಸುವಿಹಾರಿ ವಾಹನಗಳು ಬೈಲಹೊಂಗಲದಿಂದ ನೇರವಾಗಿ ಬೆಂಗಳೂರಿಗೆ ಕಾರ್ಯಾಚರಣೆಗೊಳ್ಳುತ್ತಿಲ್ಲ.

ಈ) ಪ್ರಸ್ತುತ ಗೋಕಾಕ್-ಬೆಂಗಳೂರು ಸಾರಿಗೆಯು ಜನಾನುರಾಗಿ ಸಾರಿಗೆಯಾದ್ದರಿಂದ, ಮಾರ್ಗ ಬದಲಾವಣೆ ಸಮಂಜಸವಾಗಲಾರದು. ಆದಾಗ್ಯೂ ಬೈಲಹೊಂಗಲ-ಬೆಂಗಳೂರು ಸಾರಿಗೆಯನ್ನು ಪ್ರಯಾಣಿಕರ ದಟ್ಟಣೆಯನ್ನು ಅನುಲಕ್ಷಿಸಿ, ಮರುಪ್ರಾರಂಭಿಸಲು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಸಹಕಾರ ಮತ್ತು ಖಾಸಗಿ ತಳಹದಿಯ ಮೇಲಿರುವ ನೂಲಿನ ಗಿರಣಿಗಳು

3017 - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ನೂಲಿನ ಗಿರಣಿಗಳು ಸಹಕಾರಿ ಹಾಗೂ ಖಾಸಗಿ ವ್ಯಾಪ್ತಿಯಲ್ಲಿ ಸ್ಥಾಪನೆಗೊಂಡಿದೆ?

ಆ) ಇವುಗಳಲ್ಲಿ ಎಷ್ಟು ಗಿರಣಿಗಳು ಲಾಭದಲ್ಲಿವೆ? ಹಾಗೂ ಎಷ್ಟು ಗಿರಣಿಗಳು ನಷ್ಟದಲ್ಲಿವೆ? (ವಿವರ ನೀಡುವುದು)

ಇ) ನಷ್ಟದಲ್ಲಿರುವ ನೂಲಿನ ಗಿರಣಿಗಳನ್ನು ಲಾಭದಲ್ಲಿ ತರಲು ಸರ್ಕಾರ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದೆ?

ಈ) ಬೆಳಗಾವಿ ಜಿಲ್ಲೆ ಪಂತ್‌ಬಾಳೇಕುಂದ್ರಿ ಹಾಗೂ ಸವದತ್ತಿಯ ಮಲಪ್ರಭಾ ನೂಲಿನ ಗಿರಣಿಗಳು ಮುಚ್ಚಿಹೋಗಿದ್ದು ಇವುಗಳನ್ನು ಪುನಃ ಪ್ರಾರಂಭಿಸಲು ಸರ್ಕಾರಿ ಯಾವ ಕಾರ್ಯ ಕ್ರಮಕೈಗೊಂಡಿದೆ?

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

ಅ) ರಾಜ್ಯದಲ್ಲಿ 12 ಸಹಕಾರಿ ನೂಲಿನ ಗಿರಣಿಗಳು ಸಹಕಾರ ವಲಯದಲ್ಲಿ ಮತ್ತು 48 ಗಿರಣಿಗಳು ಖಾಸಗಿ ವಲಯದಲ್ಲಿವೆ.

ಆ) ಸಹಕಾರಿವಲಯದಲ್ಲಿರುವ 12 ಗಿರಣಿಗಳಲ್ಲಿ 2 ಗಿರಣಿಗಳು ಸಮಾಪನೆಯಲ್ಲಿವೆ. 2 ಗಿರಣಿಗಳು ಕಾರ್ಯಸ್ಥಗಿತಗೊಂಡಿವೆ. ಉಳಿದ 8 ಗಿರಣಿಗಳು ನಷ್ಟದಲ್ಲಿ ನಡೆಯುತ್ತಿವೆಯಾದರೂ 2 ಗಿರಣಿಗಳು ಲಾಭದ ಅಂಚಿನಲ್ಲಿವೆ. ಖಾಸಗಿ ವಲಯದ ಗಿರಣಿಗಳ ಮೇಲೆ ಇಲಾಖೆಯ ಯಾವುದೇ ನಿಯಂತ್ರಣ ಇಲ್ಲದೇ ಇರುವುದರಿಂದ ಮಾಹಿತಿ ಲಭ್ಯವಿರುವುದಿಲ್ಲ. ಸಹಕಾರಿ ನೂಲಿನ ಗಿರಣಿಗಳ ಲಾಭ/ನಷ್ಟಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಸಹಕಾರಿ ವಲಯದ ನೂಲಿನ ಗಿರಣಿಗಳ ಲಾಭನಷ್ಟದ ಹೊಣೆಗಾರಿಕೆಯು ಗಿರಣಿಯ ಆಡಳಿತ ಮಂಡಳಿಯ ಮೇಲಿದೆ. ಗಿರಣಿಯು ನಷ್ಟ ಅನುಭವಿಸದಂತೆ ಮಾಡಲು ಎಲ್ಲಾ ಅಗತ್ಯ ಕ್ರಮಕೈಗೊಳ್ಳುವ ಅಧಿಕಾರ ಆಡಳಿತ ಮಂಡಳಿಗೆ ಇರುತ್ತದೆ. ಇದಲ್ಲದೆ ಜವಳಿ ಕ್ಷೇತ್ರದಲ್ಲಿ ಕಳೆದ 3

ವರ್ಷಗಳಿಂದ ವಿಶ್ವವ್ಯಾಪ್ತಿ ಹಿನ್ನಡೆ ಇರುತ್ತದೆ. ಆದರೂ ಸಹ ಗಿರಣಿಗಳು ನಷ್ಟ ಅನುಭವಿಸುತ್ತಿರುವುದಕ್ಕೆ ಇರುವ ಅನಿವಾರ್ಯತೆಗಳೇನೆಂಬುದನ್ನು ಕಾರಣದೊಂದಿಗೆ ಪತ್ತೆ ಹಚ್ಚಲು ಈ ಗಿರಣಿಗಳ ಸಮಗ್ರ ಅಧ್ಯಯನ ವೊಂದನ್ನು ಖಾಸಗಿ ಸಂಸ್ಥೆಯ ಮತಿಯಿಂದ ನಡೆಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಮೆ.ಟಾಟಾ ಎಕನಾಮಿಕ್ ಕನಸಲ್‌ಟೆನ್ಸಿ ಸಂಸ್ಥೆಗೆ ನೀಡಲು ಸರ್ಕಾರವು ನಿರ್ಣಯಿಸಿದೆ. ಸದರಿ ಸಂಸ್ಥೆಯು ಅಧ್ಯಯನ ನಡೆಸಿ ಸಲ್ಲಿಸಿರುವ ವರದಿ ಆಧಾರದ ಮೇಲೆ ಅವಶ್ಯವಿದ್ದಲ್ಲಿ ಪುನಃ ಶೈತನ ಕಾರ್ಯಕ್ರಮಗಳನ್ನು ರೂಪಿಸಿ ಗಿರಣಿಗಳನ್ನು ಲಾಭದತ್ತ ತರಲು ಸರ್ಕಾರವು ಯೋಚಿಸಿದೆ.

ಈ) ಈ ಎರಡು ಗಿರಣಿಗಳು ಬಂಡವಾಳದ ಕೊರತೆಯಿಂದಾಗಿ ಸ್ವಲ್ಪ ಕಾಲ ಮುಚ್ಚಿದ್ದರೂ ಜೂನ್ 2000 ರಿಂದ ಬೆಳಗಾವಿ ಗಿರಣಿ ಮತ್ತು ಸೆಪ್ಟೆಂಬರ್ 2000 ರಿಂದ ಮಲಪ್ರಭಾ ಗಿರಣಿ ಪ್ರವರ್ತನಾ ಆಧಾರದ ಮೇಲೆ ಕಾರ್ಯವನ್ನು ಪ್ರಾರಂಭಿಸಿದೆ. ಇವುಗಳು ರೋಗಗ್ರಸ್ಥವಾಗಲು ಇದರ ಹಿಂದಿರುವ ಲೋಪದೋಷಗಳನ್ನು ಗುರುತಿಸಲು ಈಗ ಸರ್ಕಾರವು ಉದ್ದೇಶಿಸಿರುವ ಸಮಗ್ರ ಅಧ್ಯಯನದಿಂದ ಸಾಧ್ಯವಾಗುವುದೆಂದು ನಿರೀಕ್ಷಿಸಲಾಗಿದೆ. ಆದ್ದರಿಂದ ಸಮಗ್ರ ಅಧ್ಯಯನ ವರದಿಯ ಆಧಾರದ ಮೇಲೆ ಮುಂದಿನ ಸೂಕ್ತ ಕ್ರಮಕೈಗೊಳ್ಳಲು ಯೋಚಿಸಲಾಗಿದೆ.

ಅನುಬಂಧ

ಸಹಕಾರಿ ನೂಲಿನ ಗಿರಣಿಗಳ ಲಾಭ-ನಷ್ಟದ ವಿವರಗಳು.

ಕ್ರ. ಸಂ.	ಗಿರಣಿಯ ಹೆಸರು	1999-2000 ಅಂತ್ಯಕ್ಕೆ ಲಾಭ/ನಷ್ಟ (ತಾತ್ಕಾಲಿಕ) ರೂ. ಲಕ್ಷಗಳಲ್ಲಿ
1.	ಬನಹಟ್ಟಿ ಸಹಕಾರಿ ನೂಲಿನ ಗಿರಣಿ, ಬನಹಟ್ಟಿ	37.78 ನಷ್ಟ
2.	ಗದಗ್ ಸಹಕಾರಿ ಜವಳಿ ಗಿರಣಿ, ಹುಲಕೋಟಿ	87.03 ನಷ್ಟ
3.	ಫಾರ್ಮರ್ಸ್ ಕೊ.ಆಪ.ಸ್ಪಿನ್ನಿಂಗ್ ಮಿಲ್ಸ್, ಹುಲಕೋಟಿ	1293.65 ನಷ್ಟ
4.	ತುಂಗಭದ್ರ ರೈತರ ಸಹಕಾರಿ ನೂಲಿನ ಗಿರಣಿ, ರಾಣೆಬೆನ್ನೂರು	1488.31 ನಷ್ಟ
5.	ಸೋಮೇಶ್ವರ ಸಹಕಾರಿ ನೂಲಿನ ಗಿರಣಿ, ಲಕ್ಷ್ಮೇಶ್ವರ	1438.59 ನಷ್ಟ
6.	ಬೆಳಗಾವಿ ಸಹಕಾರಿ ನೂಲಿನ ಗಿರಣಿ, ಬೆಳಗಾವಿ	1722.00 ನಷ್ಟ
7.	ರಾಯಚೂರು ಸಹಕಾರಿ ನೂಲಿನ ಗಿರಣಿ, ರಾಯಚೂರು	1370.92 ನಷ್ಟ
8.	ಮಲಪ್ರಭಾ ಸಹಕಾರಿ ನೂಲಿನ ಗಿರಣಿ, ಸೌಂದತ್ತಿ	2777.45 ನಷ್ಟ
9.	ವೆಂಕಟೇಶ ಸಹಕಾರಿ ಜವಳಿ ಗಿರಣಿ, ಅಣ್ಣಿಗೇರಿ	2638.05 ನಷ್ಟ

ಕ್ರ. ಸಂ.	ಗಿರಣಿಯ ಹೆಸರು	1999-2000 ಅಂತ್ಯಕ್ಕೆ ಲಾಭ:ನಷ್ಟ (ತಾತ್ಕಾಲಿಕ) ರೂ. ಲಕ್ಷಗಳಲ್ಲಿ
10.	ರೈತರ ಸಹಕಾರಿ ನೂಲಿನ ಗಿರಣಿ, ರಾಣೆಬೆನ್ನೂರು	3603.95 ನಷ್ಟ
11.	ಬಿಜಾಪುರ ಸಹಕಾರಿ ನೂಲಿನ ಗಿರಣಿ, ಬಿಜಾಪುರ	ಸಮಾಪನೆಯಲ್ಲಿದೆ
12.	ಬಾಗಲಕೋಟೆ ಸಹಕಾರಿ ನೂಲಿನ ಗಿರಣಿ, ಬಾಗಲಕೋಟೆ	ಸಮಾಪನೆಯಲ್ಲಿದೆ.

ಗೃಹ ಮಂಡಳಿಯಲ್ಲಿ ಬಿಡಿ ನಿವೇಶನ ಮಂಜೂರಾತಿ

3018 - ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪ್ರಸ್ತುತ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕರ್ನಾಟಕ ಗೃಹ ಮಂಡಳಿಯಲ್ಲಿ ಬಿಡಿ ನಿವೇಶನ ಮಂಜೂರು ಮಾಡಲಾದ ಸಂಖ್ಯೆ ಎಷ್ಟು? (ವಿವರ ಒದಗಿಸುವುದು)*

ಆ) *ಬಿಡಿ ನಿವೇಶನ ಹಂಚಿಕೆ ಮಾಡಲು ಮಾನದಂಡಗಳೇನು?*

ಇ) *ಕಾನೂನುಬಾಹಿರವಾಗಿ ಈಗಲೂ ಬಿಡಿ ನಿವೇಶನಗಳನ್ನು ಕರ್ನಾಟಕ ಗೃಹ ಮಂಡಳಿ ಮಂಜೂರು ಮಾಡುತ್ತಿರುವುದು ನಿಜವೇ?*

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) 335

ಆ) ಲಭ್ಯವಿರುವ ಬಿಡಿ ನಿವೇಶನಗಳನ್ನು ಕರ್ನಾಟಕ ಗೃಹ ಮಂಡಳಿ (ಹಂಚಿಕೆ) ನಿಯಮಾವಳಿ 4(ಎ) ಪ್ರಕಾರ ಹಂಚಲಾಗುತ್ತಿದೆ.

ಇ) ನಿಜವಲ್ಲ.

ಬೆಂಗಳೂರು ನಗರದಲ್ಲಿರುವ ಸರ್ಕಾರಿ ಜಮೀನುಗಳು

3021 - ಶ್ರೀ ಮೋಹನ್ ಪಿ.ಸಿ. (ಚಿಕ್ಕಪೇಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಸರ್ಕಾರಿ ಜಮೀನಿನ ವಿಸ್ತೀರ್ಣ ಎಷ್ಟು? ತಾಲ್ಲೂಕುವಾರು ವಿವರ ನೀಡಿ?*

ಆ) *ಈ ಪೈಕಿಯಲ್ಲಿ ಇರುವ ಜಮೀನಿನ ವಿಸ್ತೀರ್ಣ ಹಾಗೂ ಒತ್ತುವರಿಯಾಗಿರುವ ಜಮೀನಿನ ವಿಸ್ತೀರ್ಣ ಎಷ್ಟು?*